# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/ವಿಶೇಷ/2021-22

ಜ್ಞಾನ ಭಾರತಿ,
ಬೆಂಗಳೂರು-560 056
ದಿನಾಂಕ: 13/10/2021

ಸಿಂಡಿಕೇಟ್ ಸದಸ್ಯರು,
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು-560 056.

ಮಾನ್ಯರೇ,

ವಿಷಯ: ದಿನಾಂಕ 12.10.2021 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳು

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 13.10.2021

******

ದಿನಾಂಕ 12.10.2021 ರಂದು ಸಾಯಂಕಾಲ 5.30 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ ಸದರಿ ಪರಿನಿಯಮಾವಳಿಯನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಡನೆ,

ತಮ್ಮ ವಿಶ್ವಾಸಿ,

ಕುಲಸಚಿವರು

# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/ವಿಶೇಷ/2021-22

ಜ್ಞಾನಭಾರತಿ
ಬೆಂಗಳೂರು-560 056
ದಿನಾಂಕ: 13-10-2021

**ದಿನಾಂಕ 12-10-2021 ರಂದು ಸಂಜೆ 05.30 ಗಂಟೆಗೆ ಆನ್-ಲೈನ್ ತಂತ್ರಾಂಶದ ಮೂಲಕ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳು.**

<u>ಹಾಜರಾದ ಸದಸ್ಯರು:</u>

| | | | |
|---|---|---|---|
| 1. | ಪ್ರೊ. ವೇಣುಗೋಪಾಲ್ ಕೆ.ಆರ್.<br>ಕುಲಪತಿಗಳು | - | ಸಭಾಧ್ಯಕ್ಷರು |
| 2. | ಡಾ॥ ದೀಪಾ ಶಣೈ ಪಿ, | - | ಸದಸ್ಯರು |
| 3. | ಶ್ರೀ ಕುಮಾರ ಟಿ, | - | ಸದಸ್ಯರು |
| 4. | ಡಾ॥ ಧನಂಜಯ ಬಿ.ಆರ್ | - | ಸದಸ್ಯರು |
| 5. | ಡಾ॥ ಶೈಲಜ ಎಂ | - | ಸದಸ್ಯರು |
| 6. | ಡಾ॥ ಕೆ.ಎಲ್. ಸುಧೀರ್ ಪೈ | - | ಸದಸ್ಯರು |
| 7. | ಪ್ರೊ. ಜಯಕುಮಾರ್ ಜಿ. ರೆಡ್ಡಿ | - | ಸದಸ್ಯರು |
| 8. | ಪ್ರೊ. ಜೆ.ಟಿ. ದೇವರಾಜು,<br>ಕುಲಸಚಿವರು (ಮೌಲ್ಯಮಾಪನ) | - | ಸದಸ್ಯರು |
| 9. | ಶ್ರೀಮತಿ ಕೆ. ಜ್ಯೋತಿ, ಭಾ.ಆ.ಸೇ<br>ಕುಲಸಚಿವರು | - | ಸದಸ್ಯ ಕಾರ್ಯದರ್ಶಿ |

ಒಂದು ನಿಮಿಷ ಪ್ರಾರ್ಥನೆಯ ನಂತರ ಸಭೆ ಪ್ರಾರಂಭವಾಯಿತು.

ಕುಲಸಚಿವರು ಮಾತನಾಡಿ, ಕುಲಪತಿಗಳನ್ನು ಮತ್ತು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು ಹಾಗೂ ಸಭೆ ನಡೆಸಿಕೊಡುವಂತೆ ಅಧ್ಯಕ್ಷರನ್ನು ಕೋರಿದರು.

ಕುಲಪತಿಗಳು ಹೊಸದಾಗಿ ಸಿಂಡಿಕೇಟ್ ಸಭೆಗೆ ನಾಮ ನಿರ್ದೇಶನಗೊಂಡ ಹಿರಿಯ ಡೀನರಾದ ಡಾ॥ ದೀಪಾ ಶಣೈ ಪಿ ಹಾಗೂ ನಾಲ್ಕು ಜನ ಪ್ರಾಂಶುಪಾಲರುಗಳಾದ ಶ್ರೀ ಕುಮಾರ ಟಿ, ಡಾ॥ ಧನಂಜಯ ಬಿ.ಆರ್, ಡಾ॥ ಶೈಲಜ ಎಂ, ಡಾ॥ ಕೆ.ಎಲ್. ಸುಧೀರ್ ಪೈ, ಅವರುಗಳನ್ನು ಸಭೆಗೆ ಪರಿಚಯಿಸಿ ಅವರುಗಳನ್ನೂ ಸ್ವಾಗತಿಸಿದರು.

ನಂತರ ಕುಲಪತಿಗಳು ಮಾತನಾಡಿ, ವಿಶೇಷ ಸಿಂಡಿಕೇಟ್ ಸಭೆಯನ್ನು ತುರ್ತಾಗಿ ಕರೆದಿರುವ ಹಿನ್ನೆಲೆಯನ್ನು ವಿವರಿಸಿ, ಕೆಳಕಂಡ ವಿಷಯಗಳ ಬಗ್ಗೆ ನಿರ್ಣಯ ಬೇಕಾಗಿದೆ ಎಂದು ಕೋರಿದರು.

1. ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರನ್ನು ಮುಂದುವರೆಸುವ ಕುರಿತು.
2. ರಾಷ್ಟ್ರೀಯ ಶಿಕ್ಷಣ ನೀತಿಯಡಿಯಲ್ಲಿ ವಿಶ್ವವಿದ್ಯಾಲಯದಲ್ಲಿ ನಾಲ್ಕು ವರ್ಷಗಳ ಬಿ.ಎ. (ಆನರ್ಸ್) ಬಿ.ಎಸ್ಸಿ. (ಆನರ್ಸ್) ಕೋರ್ಸುಗಳನ್ನು 2021-22ನೇ ಸಾಲಿನಿಂದ ಪ್ರಾರಂಭಿಸುವ ಬಗ್ಗೆ ಅನುಮೋದನೆ ಕುರಿತು.

ಕುಲಪತಿಗಳು ಮುಂದುವರೆದು ಮಾತನಾಡಿ, ಬೇರೆ ವಿಶ್ವವಿದ್ಯಾಲಯಗಳು ಆನರ್ಸ್ ಪದವಿ ಕೋರ್ಸುಗಳನ್ನು ಪ್ರಾರಂಭಿಸಿದ್ದು, ಬೆಂಗಳೂರು ವಿಶ್ವವಿದ್ಯಾಲಯವೂ ಸಹ ಮೇಲ್ಕಂಡ ನಾಲ್ಕು ವರ್ಷಗಳ ಆನರ್ಸ್ ಪದವಿ ಕೋರ್ಸುಗಳನ್ನು ಪ್ರಾರಂಭಿಸಬಹುದಾಗಿದೆ. ಸದರಿ ಕೋರ್ಸುಗಳನ್ನು ಪ್ರಾರಂಭಿಸಲನುವಾಗಲು ಈಗಾಗಲೇ ತಾತ್ಕಾಲಿಕವಾಗಿ ಕೋ–ಆರ್ಡಿನೇಟರ್‌ಗಳನ್ನು ನೇಮಕ ಮಾಡಲಾಗಿದೆ. ಈ ಕೋರ್ಸುಗಳಿಗೆ ಅನುಕ್ರಮವಾಗಿ ರೂ.10,000/– ಹಾಗೂ ರೂ.17,000/–ಗಳನ್ನು ವಾರ್ಷಿಕ ಶುಲ್ಕ ನಿಗದಿಪಡಿಸಬಹುದಾಗಿದೆ ಎಂದು ತಿಳಿಸಿದರು.

ಈ ಸಭೆಯನ್ನು ತುರ್ತಾಗಿ ಕಡಿಮೆ ಅವಧಿಯಲ್ಲಿ ಕರೆದಿರುವುದರಿಂದ ಕೆಲವು ಸದಸ್ಯರುಗಳು ಸಭೆಯಲ್ಲಿ ಭಾಗವಹಿಸಲು ಸಾಧ್ಯವಾಗಿರುವುದಿಲ್ಲ. ಆದುದರಿಂದ, ಮೇಲ್ಕಂಡ ವಿಷಯಗಳ ಬಗ್ಗೆ ನಿರ್ಣಯಗಳನ್ನು ಮುಂದಿನ ಸಿಂಡಿಕೇಟ್ ಸಭೆಗೆ ಅನುಸಮರ್ಥನೆಗೆ ಮಂಡಿಸಬಹುದಾಗಿದೆ ಎಂದು ತಿಳಿಸಿದರು.

*ನಿರ್ಣಯ:*

ಚರ್ಚೆಯ ನಂತರ ಸಿಂಡಿಕೇಟ್ ಕೆಳಕಂಡ ನಿರ್ಣಯಗಳನ್ನು ತೆಗೆದುಕೊಂಡಿತು.

1. ವಿಶ್ವವಿದ್ಯಾಲಯದಲ್ಲಿ ಈ ಹಿಂದೆ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದ ನೌಕರರನ್ನು ಎರಡು ಕಾರ್ಯ ನಿರತ ದಿನಗಳ ಬಿಡುವು ನೀಡಿ ಮುಂದಿನ ಆರು ತಿಂಗಳ ಅವಧಿಗೆ ಮುಂದುವರೆಸಲು ಸಿಂಡಿಕೇಟ್ ನಿರ್ಣಯಿಸಿತು. ಹಾಗೂ ಹೊರಗುತ್ತಿಗೆ ನೌಕರರಿಗೆ ಅವರ ಸಂಭಾವನೆಯ ಜೊತೆಗೆ ಪಿ.ಎಫ್. ಹಾಗೂ ಇ.ಎಸ್.ಐ. ಸೌಲಭ್ಯಗಳನ್ನು ನೀಡುವ ಬಗ್ಗೆ ಮುಂದಿನ ಸಿಂಡಿಕೇಟ್ ಸಭೆಗೆ ಟಿಪ್ಪಣಿಯನ್ನು ಮಂಡಿಸಬೇಕೆಂದು ಸಿಂಡಿಕೇಟ್ ನಿರ್ಣಯಿಸಿತು.

2. 2021–22ನೇ ಸಾಲಿನಿಂದ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನಾಲ್ಕು ವರ್ಷಗಳ ಬಿ.ಎ. (ಆನರ್ಸ್) ಬಿ.ಎಸ್ಸಿ. (ಆನರ್ಸ್) ಕೋರ್ಸುಗಳನ್ನು ಪ್ರಾರಂಭಿಸಲು ಹಾಗೂ ಸದರಿ ಕೋರ್ಸುಗಳಿಗೆ ಸೂಕ್ತ ವಾರ್ಷಿಕ ಶುಲ್ಕಗಳನ್ನು ನಿಗದಿಪಡಿಸಲು ಸಿಂಡಿಕೇಟ್ ಸಭೆ ಅನುಮೋದಿಸಿತು.

ಮೇಲ್ಕಂಡ ವಿಷಯಗಳನ್ನು ಮತ್ತೊಮ್ಮೆ ಮುಂದಿನ ಸಿಂಡಿಕೇಟ್ ಸಭೆಗೆ ಅನುಸಮರ್ಥನೆಗೆ ಮಂಡಿಸಬೇಕೆಂದು ಸಿಂಡಿಕೇಟ್ ಸೂಚಿಸಿತು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

**ಕುಲಪತಿಯವರು**